**ಸಿ ಮಿಸ್ 206/2019**

**ಪಿ.ಡಬ್ಲ್ಯೂ1**

ದಿಃ **21.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲು ಎದುರುದಾರರ ಪರ ಶ್ರೀ ಬಿ ಎಸ್ ವೈ ವಕೀಲರಿಂದಃ**

ಎದುರುದಾರರು ನನ್ನ ಗಂಡ. ನನ್ನ ಅಕ್ಕನ ಹೆಸರು ಗೌರಮ್ಮ, ಅವರನ್ನು ನನ್ನ ಗಂಡನ ಅಣ್ಣನಿಗೆ ಮದುವೆ ಮಾಡಿಕೊಟ್ಟಿರುತ್ತೇವೆ. ನಾನು ಮತ್ತು ನನ್ನ ಅಕ್ಕ, ನನ್ನ ಗಂಡ ಮತ್ತು ಅವರ ಅಣ್ಣನವರನ್ನು ಮದುವೆಯಾಗಿರುತ್ತೇವೆ ಎಂದರೆ ಸರಿ. ನಾನು ಚೋಳೇನಹಳ್ಳಿಯಲ್ಲಿ ವಾಸವಾಗಿದ್ದೇನೆ. ನಾನು ನನ್ನ ಗಂಡನ ಮನೆಯಲ್ಲಿ ವಾಸವಾಗಿಲ್ಲ, ಪಕ್ಕದ ಮನೆಯಲ್ಲಿ ವಾಸವಾಗಿದ್ದೇನೆ. ಪಕ್ಕದ ಮನೆ ಎಂದರೆ ನನ್ನ ಅಕ್ಕನ ಮಗನ ಮನೆ, ಆ ಮನೆಯಲ್ಲಿ ವಾಸವಾಗಿದ್ದೇನೆ. ನೀವು ನಿಮ್ಮ ಗಂಡನ ಮನೆಯಲ್ಲಿಯೇ ವಾಸವಾಗಿದ್ದೀರಿ ಅಕ್ಕನ ಮಗನ ಮನೆಯಲ್ಲಿ ವಾಸವಾಗಿದ್ದೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮದುವೆಯಾಗಿ ಸುಮಾರು 15 ವರ್ಷಗಳಾಗಿರುತ್ತದೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಅರ್ಜಿ ಬಗ್ಗೆ ತಿಳಿದಿದೆಯಾ ಎಂದರೆ ಸಾಕ್ಷಿ ನನಗೆ ಓದಲು ಬರುವುದಿಲ್ಲ, ಆದ್ದರಿಂದ ತಿಳಿದಿಲ್ಲ. ನೀವು ಮದುವೆಯಾದಾಗ ನಿಮಗೆ ಎಷ್ಟು ವಯಸ್ಸಾಗಿತ್ತು ಎಂದರೆ ಸಾಕ್ಷಿ ಚಿಕ್ಕ ವಯಸ್ಸಾಗಿತ್ತು ಎಂದು ಉತ್ತರಿಸುತ್ತಾರೆ. ನೀವು ನಿಮ್ಮ ಅರ್ಜಿಯಲ್ಲಿ 54 ವರ್ಷ ಎಂದು ನಮೂದು ಮಾಡಿಸಿದ್ದೀರಿ ಎಂದರೆ ಸರಿ. ನಿಮ್ಮ ಅರ್ಜಿಯಲ್ಲಿ ನೀವು ಮದುವೆಯಾಗಿ 46 ವರ್ಷವಾಗಿದೆ ಎಂದು ನಮೂದು ಮಾಡಿಸಿದ್ದೀರಿ ಎಂದರೆ ಸಾಕ್ಷಿ ನನಗೆ ಅಷ್ಟು ಗೊತ್ತಾಗುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಮಗೆ ಮಕ್ಕಳು ಇಲ್ಲ ಎಂದರೆ ಸಾಕ್ಷಿ ಒಂದು ಮಗು ಇತ್ತು, ಅದು ಈಗ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಗಂಡನಿಗೆ ನೀವೇ ನಿಂತು ಮದುವೆ ಮಾಡಿಸಿದ್ದೀರಿ ಎಂದರೆ ಸರಿ. ಸಾಕ್ಷಿ ಮುಂದುವರಿದು ಮದುವೆ ಮಾಡಿಸುವಾಗ ಎಲ್ಲಾ ಚೆನ್ನಾಗಿತ್ತು, ಈಗ ಸರಿಯಾಗಿಲ್ಲ ಎಂದು ಉತ್ತರಿಸುತ್ತಾರೆ. ನೀವು ಈಗಲೂ ಸಹ ನಿಮ್ಮ ಗಂಡನ ಮನೆಯಲ್ಲೇ ವಾಸವಾಗಿದ್ದೀರಿ ಹಾಗೂ ಅಲ್ಲೇ ಊಟವನ್ನು ಮಾಡುತ್ತೀರಿ ಎಂದರೆ ಸರಿಯಲ್ಲ.

ಈ ಪ್ರಕರಣವನ್ನು ದಾಖಲಿಸುವ ಮುನ್ನ ನಾನು ಠಾಣೆಗೆ ದೂರನ್ನು ನೀಡಿರುವುದಿಲ್ಲ, ನ್ಯಾಯ ಪಂಚಾಯತಿಯಾಗಿರುತ್ತದೆ. ಇತ್ತೀಚೆಗೆ ಸುಮಾರು 6 ತಿಂಗಳ ಹಿಂದೆ ನ್ಯಾಯ ಪಂಚಾಯತಿ ಆಗಿರುತ್ತದೆ. ನ್ಯಾಯ ಪಂಚಾಯತಿಗೆ ಸೇರಿರುವವರೆಲ್ಲಾ ತೀರಿಕೊಂಡಿರುತ್ತಾರೆ. ನಿಮ್ಮ ತವರು ಮನೆ ದೊಡ್ಡೇಕೊಪ್ಪಲು ಎಂದರೆ ಸರಿ. ನೀವು ದೊಡ್ಡೇಕೊಪ್ಪಲು ವಿಳಾಸವನ್ನು ನೀಡಿ ಸರ್ಕಾರದಿಂದ ಮಾಸಿಕ ಪಿಂಚಣಿಯನ್ನು ಪಡೆಯುತ್ತಿದ್ದೀರಿ ಎಂದರೆ ಸರಿ. ನೀವು ದೊಡ್ಡೇಕೊಪ್ಪಲಿನಲ್ಲಿ ಪಿಂಚಣಿಯನ್ನು ಪಡೆಯುವಾಗ ನಿಮ್ಮ ಗಂಡ ತೀರಿಕೊಂಡಿದ್ದಾರೆಂದು

ಪಿಂಚಣಿ ಪಡೆಯುತ್ತಿದ್ದೀರಿ ಎಂದರೆ ಸರಿ. ನೀವು ಸರ್ಕಾರಕ್ಕೆ ಸುಳ್ಳು ಮಾಹಿತಿಯನ್ನು ನೀಡಿ ಈ ರೀತಿ ಪಿಂಚಣಿಯನ್ನು ಪಡೆಯುತ್ತಿರುವುದು ತಪ್ಪು ಎಂದರೆ ಸರಿ. ಆ ರೀತಿ ಸುಳ್ಳು ಹೇಳಿ ಪಿಂಚಣಿ ಪಡೆದರೆ ಅದು ಶಿಕ್ಷಾರ್ಹ ಅಪರಾಧ ಎಂದರೆ ಸರಿ.

ನಿಮ್ಮ ಗಂಡನ ಆರೋಗ್ಯ ಸರಿ ಇಲ್ಲ ಎಂದರೆ ಸರಿ. ಅವರಿಗೆ ತಿಂಗಳಿಗೆ 3-4 ಸಾವಿರ ಖರ್ಚಿಗಾಗಿ ಹಣ ಬೇಕಾಗುತ್ತದೆ ಎಂದರೆ ಸರಿ. ನಿಮ್ಮ ಗಂಡನಿಗೆ ದುಡಿಯುವ ಶಕ್ತಿ ಇಲ್ಲ ಎಂದರೆ ಸರಿ, ಸಾಕ್ಷಿ ಮುಂದುವರಿದು ನನ್ನ ಗಂಡ ಸಾಯುವ ಸ್ಥಿತಿಯಲ್ಲಿ ಇರುತ್ತಾರೆ ಅವರಿಗೆ ದುಡಿಯಲು ಆಗುವುದಿಲ್ಲ ಎಂದು ಉತ್ತರಿಸುತ್ತಾರೆ. ನನ್ನ ಗಂಡನಿಗೆ ಸೇರಿರುವ ಆಸ್ತಿಗಳ ಬಗ್ಗೆ ದಾಖಲಾತಿಯನ್ನು ನೀಡಿರುತ್ತೇನೆ. ನಿಪಿ1 ರಲ್ಲಿ ಸದರಿ ಆಸ್ತಿ ನಿಮ್ಮ ಗಂಡ ಹಾಗೂ ನಿಮ್ಮ ಭಾವನಾದ ಚಾಮನಾಯಕನ ಹೆಸರಿನಲ್ಲಿದೆ ಎಂದರೆ ಸರಿ. ನಿಪಿ2 ರಲ್ಲಿ ಇರುವ ಮನೆಯಲ್ಲಿ ನೀವು ವಾಸವಾಗಿದ್ದೀರಿ ಎಂದರೆ ಸರಿ. ನಿಮ್ಮ ಗಂಡನಿಗೆ ಯಾವುದೇ ಆದಾಯ ಇಲ್ಲ ಎಂದರೆ ಸಾಕ್ಷಿ ಕನಕಾಂಬರ ಹೂವನ್ನು ಬಿಡಿಸುತ್ತಾರೆ. ನನಗೆ ಸರ್ಕಾರದಿಂದ ಒಟ್ಟಾಗಿ ರೂ.2700/- ಬರುತ್ತದೆ. ನನಗೆ ಪಡಿತರ ಚೀಟಿಯಿಂದ 10 ಕೆ ಜಿ ಅಕ್ಕಿ ಸಿಗುತ್ತದೆ. ನಿಮಗೆ ಪ್ರತಿ ತಿಂಗಳು 10 ಕೆ ಜಿ ಅಕ್ಕಿಯಲ್ಲಿ ಇನ್ನೂ ಸ್ವಲ್ಪ ಅಕ್ಕಿ ಉಳಿಯುತ್ತದೆ ಹಾಗೂ ಹಣ ಸಹ ಸ್ವಲ್ಪ ಉಳಿಯುತ್ತದೆ ಎಂದರೆ ಸರಿ. ನೀವು ಹಣವನ್ನು ಉಳಿಸಿದ್ದರಲ್ಲಿ ನಿಮ್ಮ ಗಂಡನ ವೈದ್ಯಕೀಯ ಖರ್ಚನ್ನು ನೀವೇ ನೋಡಿಕೊಳ್ಳುತ್ತಿದ್ದೀರಿ ಎಂದರೆ ಸರಿ. ನಿಮ್ಮ ಗಂಡನಿಗೆ ನೀವೇ ಆರೋಗ್ಯವಾಗಿದ್ದೀರಿ ಎಂದರೆ ಸರಿ. ನಿಮ್ಮ ಗಂಡನಿಗೆ ಶಕ್ತಿ ಇಲ್ಲದ ಕಾರಣ ಅವರಿಂದ ಜೀವನಾಂಶವನ್ನು ನೀಡಲು ಆಗುವುದಿಲ್ಲ ಹಾಗೂ ನಿಮಗೆ ಪರಿಹಾರ ಪಡೆಯಲು ಯಾವುದೇ ಅವಶ್ಯಕತೆ ಇಲ್ಲ ಎಂದರೆ ಸರಿ, ಸಾಕ್ಷಿ ಮುಂದುವರಿದು ನಾನು ಹೀಗೆ ದುಡಿದುಕೊಂಡು ಸಾಯಬೇಕಾ ಎಂದು ಉತ್ತರಿಸುತ್ತಾರೆ.

**ಮರುವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಒಂದನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು.